ಈ. ಸ್ವಂತ ಉದ್ಯೋಗ ಯೋಜನೆ ಅಡಿಯಲ್ಲಿ ವಾಹನ ಕೊಳ್ಳುವವರಿಗೆ ಅಬ್ಕಾರಿ ಶುಲ್ಕ ವಿನಾಯಿತಿ ಹಾಗೂ ಕಡಿಮೆ ಬಡ್ಡಿ ದರ ಕೊಡಲಾಗುವುದೇ;

ಉ. ಅಂತೆಯೇ ಟ್ರಾಕ್ಟರ್ ಹಾಗೂ ಇತರೆ ಕೃಷಿ ಉಪಕರಣಗಳಿಗೆ ವಿನಾಯಿತಿ ಕೊಡಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು. ಸಣ್ಣ ಮತ್ತು ಅತಿ ಸಣ್ಣ ರೈತರು ರೂ. 15,000–00 ಗಳವರೆಗೆ ಪಡೆಯುವ ಸಾಲಕ್ಕೆ ಮುದ್ರಾಂಕ ಶುಲ್ಕ ಈಗ ವಿನಾಯ್ತಿ ಇದೆ. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ರೈತರು ಪಡೆಯುವ ರೂ. 25,000–00 ವರೆಗಿನ ಸಾಲಕ್ಕೆ ಮುದ್ರಾಂಕ ಶುಲ್ಕ ವಿನಾಯ್ತಿ ಇದೆ.

ಇಲ್ಲಾ, ಏಕೆಂದರೆ ಯಾರು ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಸಿದರೂ ಮುದ್ರಾಂಕ ಶುಲ್ಕವನ್ನು ಕೊಡಬೇಕಾಗುತ್ತದೆ.

ಇ. ಹೌದು.

ಈ. ಪ್ರಶ್ನೆ ಕಂದಾಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಉ. ಇಲ್ಲಾ

ಚಿಕ್ಕನಾಯಕನಹಳ್ಳಿ ಕಂಬಳಿ ನೇಕಾರರ ಸಂಘದ ಪುನಃಶ್ಚೇತನ

(1708): ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಜವಳಿ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕನಾಯ್ಕನಹಳ್ಳಿಯಲ್ಲಿ ಕಂಬಳಿ ತಯಾರಿಕೆಗಾಗಿ ಒಂದು ಸಹಕಾರ ಸಂಘ ಇದ್ದುದು ಹಾಗೂ ಈಗ ಅದು ಸ್ಥಗಿತವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ಅದನ್ನು ಪುನಶ್ಚೇತನಗೊಳಿಸಲು ಸರ್ಕಾರವು ಆಲೋಚಿಸಿದೆಯೇ; ಹಾಗಿಲ್ಲವಾದಲ್ಲಿ ಆ ಸಂಸ್ಥೆಯನ್ನು ಅವಲಂಬಿಸಿದ್ದ ನೇಕಾರ ಸಂಖ್ಯೆ ಎಷ್ಟು; ಅವರಿಗೆ ಉಣ್ಣೆ ಸರಬರಾಜು ಮಾಡಲು ಮಾಡಿರುವ ಬೇರೆ ವ್ಯವಸ್ಥೆ ಯಾವುದು;

ಇ. ಹಾಗಿಲ್ಲದಿದ್ದಲ್ಲಿ ಅವರಿಗೆ ಇದರಿಂದಾದ ನಷ್ಟ ತುಂಬಿಸಲು ಬೇರೆ ಉದ್ಯೋಗ ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):–

ಅ. ಹೌದು

ಆ. ಸದರಿ ಸಂಘದ ಪುನಶ್ಚೇತನಕ್ಕೆ ಪ್ರಸ್ತಾವನೆ ಬಂದಿದ್ದು ಪರಿಶೀಲನೆಯಲ್ಲಿದೆ.

ಇ. ಉದ್ಭವಿಸುವುದಿಲ್ಲ.

ನ್ಯಾಷನಲ್ ಕೋ– ಆಪರೇಟಿವ್ ಬ್ಯಾಂಕಿನಲ್ಲಿ ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿರುವ ಬಗ್ಗೆ

(1948): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?